ಕರ್ನಾಟಕ ವಿಧಾನಸಭೆ

ಸೋಮವಾರ 17ನೇ ಜುಲೈ 2006ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಗ್ಗೆ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆ.

ವಿಷಯ: ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಟಿ.ಬಿ. ಬಾಳಿಕಾಯಿ ಅವರ ನಿಧನದ ಬಗ್ಗೆ.

ಸಭಾಧ್ಯಕ್ಷರು : ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಟಿ.ಬಿ. ಬಾಳಿಕಾಯಿ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತೇನೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ತಿಪ್ಪಣ್ಣ ಬಸವಣ್ಣೆಪ್ಪ ಬಾಳಿಕಾಯಿ ಅವರು 1ನೇ ಮಾರ್ಚ್ 1945ರಂದು ಲಕ್ಷ್ಮೇಶ್ವರದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಸಮಾಜ ಸೇವೆ ಹಾಗೂ ಬಡ ಜನತೆಯ ಅಭಿವೃದ್ಧಿ ಕಾರ್ಯಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದ ಶ್ರೀಯುತರು ತಾಲ್ಲೂಕು ಜನತಾಪಕ್ಷ, ಲಯನ್ಸ್ ಕ್ಲಬ್ ಹಾಗೂ ವಕೀಲರ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. 1985ರಲ್ಲಿ ಎಂಟನೇ ವಿಧಾನಸಭೆಗೆ ಶಿರಹಟ್ಟಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 14-7-2006ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಅದನ್ನು ನಾನು ಧ್ವನಿಗೂಡಿಸುತ್ತಾ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಟಿ.ಬಿ. ಬಾಳಿಕಾಯಿ ಅವರು ನಿಧನರಾಗಿದ್ದಾರೆ. ಹಿಂದೆ ಆ ನಾಡಿನ ಮತ್ತು ಆ ಭಾಗದ ಜನರ ಪರವಾಗಿ ಹೋರಾಟ ಮಾಡಿದವರಾಗಿದ್ದಾರೆ. ವೃತ್ತಿಯಲ್ಲಿ ತಾವು ಹೇಳಿದ ಹಾಗೆ ಅವರು ವಕೀಲರಾಗಿದ್ದರು. ಸಮಾಜ ಸೇವೆಯಲ್ಲಿ ಅವರು ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು ಭಾರತೀಯ ಜನತಾ ಪಾರ್ಟಿಯನ್ನು ಸೇರಿ ಆ ಭಾಗದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ನಮ್ಮ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಅವರ ಕೊಡುಗೆ ಬಹಳ ಅಪಾರವಾಗಿತ್ತು. ಅವರು ವಕೀಲರ ಸಂಘದ ಅಧ್ಯಕ್ಷರಾಗಿ ಆ ಭಾಗದ ಜನರ ಸಮಸ್ಯೆಗಳನ್ನು ಅರಿತುಕೊಂಡು ಜನಾನುರಾಗಿಯಾದಂತಹ

ಟಿ.ಬಿ. ಬಾಳಿಕಾಯಿಯವರನ್ನು ಕಳೆದುಕೊಂಡು ಆ ಭಾಗದ ಜನರು ತಬ್ಬಲಿಗಳಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಆ ದುಃಖವನ್ನು ತಡೆಯುವಂತಹ ಶಕ್ತಿಯನ್ನು ಅವರ ಕುಟುಂಬಗಳಿಗೆ ಕೊಡಲಿ ಎಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡಿ ನಾನು ತಮ್ಮ ಈ ಸಂತಾಪ ಸೂಚನೆಗೆ ಧ್ವನಿಗೂಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶ್ರೀ ತಿಪ್ಪಣ್ಣ ಬಸವಣ್ಣೆಪ್ಪ ಬಾಳಿಕಾಯಿಯವರು 1985ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ಸದನದ ಸದಸ್ಯರಾಗಿ ಕೆಲಸವನ್ನು ಮಾಡಿದ್ದಾರೆ. ಆ ಪಕ್ಷದ ತಾಲ್ಲೂಕು ಅಧ್ಯಕ್ಷರಾಗಿ, ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿಯೂ ವಕೀಲರಾಗಿದ್ದರು. ಅವರು ಆ ಭಾಗದ ಜನನಾಯಕರು ಆಗಿದ್ದರು. ಅವರ ನಿಧನದಿಂದ ಕರ್ನಾಟಕ ರಾಜ್ಯಕ್ಕೆ ಮತ್ತು ಆ ಪಕ್ಷಕ್ಕೆ ಅತೀವ ಹಾನಿಯಾಗಿದೆ. ಅದರ ಬಗ್ಗೆ ತಮ್ಮ ಮುಖಾಂತರ ಅವರ ಎಲ್ಲಾ ಪರಿವಾರದ ಸದಸ್ಯರಿಗೆ ದೇವರು ದುಃಖವನ್ನು ಶಮನ ಮಾಡುವ ಶಕ್ತಿಯನ್ನು ಕೊಡಲಿ. ಮತ್ತು ತಮ್ಮ ಮುಖಾಂತರ ಶ್ರದ್ಧಾಂಜಲಿಯನ್ನು ಕೂಡ ಈ ಸಮಯದಲ್ಲಿ ಸಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬಾಳಿಕಾಯಿಯವರ ನಿಧನದಿಂದ ನಮ್ಮ ರಾಜ್ಯಕ್ಕೆ ಮತ್ತು ಅವರು ಸ್ಪರ್ಧಿಸಿರುವಂತಹ ಕ್ಷೇತ್ರಕ್ಕೆ ಅಪಾರವಾದಂತಹ ನಷ್ಟವಾಗಿದೆ. ನಾನು ಮಾನ್ಯ ಬಾಳಿಕಾಯಿಯವರ ವಿಚಾರದ ಬಗ್ಗೆ ಈ ಹಿಂದೆ ತಮ್ಮ ಗಮನಕ್ಕೆ ತಂದಿದ್ದೆ. ಈ ತರಹ ಮಾಜಿ ಶಾಸಕರುಗಳು ತೀರಿಕೊಂಡಾಗ ಅಥವಾ ಶಾಸಕರುಗಳು ತೀರಿಕೊಂಡಾಗ ಸುಮ್ಮನೆ ಸಂತಾಪಸೂಚಕ ನಿರ್ಣಯವನ್ನು ಅವರ ಮನೆಗೆ ಕಳುಹಿಸುವ ಬದಲು ಇದರ ಬಗ್ಗೆ ಸಮಗ್ರವಾಗಿ ಒಂದು ಸಮಿತಿಯನ್ನು ಮಾಡಿ ಎಂದು ಹೇಳಿದ್ದೆ. ತಾವು ಮತ್ತು ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಸೇರಿದಂತೆ ಸಂಸದೀಯ ಸಚಿವರುಗಳು ಸೇರಿ ಒಂದು ಸಮಿತಿಯನ್ನು ಮಾಡಿ ಅವರ ಜೀವನದ ಪ್ರಶ್ನೆ ಏನು? ಅವರ ವ್ಯವಸ್ಥೆ ಏನು? ಅವರನ್ನು ನಂಬಿರುವಂತಹ ಪರಿಸ್ಥಿತಿ ಏನು ಎಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈ ಹಿಂದೆ ಒಂದು ಲೇಖನ ಪ್ರಕಟವಾಗಿತ್ತು. ಒಬ್ಬ ಮಾಜಿ ಶಾಸಕರು ಕೂಲಿ ಮಾಡುತ್ತಾರೆನ್ನುವಂತಹ ಪರಿಸ್ಥಿತಿ ತಾವು ಕೇಳಿರಬಹುದು. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು ಈ ಸದನ ಮುಗಿಯುವುದರೊಳಗಾಗಿ ಎಲ್ಲಾ ವಿರೋಧಪಕ್ಷದವರ ಸಭೆಯನ್ನು ಕರೆದು ಮುಂದೆ ಈ ರೀತಿ ಮಾಜಿ ಶಾಸಕರುಗಳು ತೀರಿಕೊಂಡಾಗ ಅವರ ಜೀವನದ ಪ್ರಶ್ನೆ, ಜೀವನದ ಭದ್ರತೆ, ಅವರಿಗೆ ವ್ಯವಸ್ಥೆ, ಯಾವ ರೀತಿ ಇದೆ, ಅವರು ಚೆನ್ನಾಗಿದ್ದಾರೆ ಅವರಿಗೇನು ನಾವು ಸಹಕಾರ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಚೆನ್ನಾಗಿಲ್ಲದವರು ಬಹಳ ಜನರು ಇದ್ದಾರೆ, ಬಹುಶಃ ನಿವೃತ್ತಿ ವೇತನವನ್ನು ತೆಗೆದುಕೊಳ್ಳಲು ಇಲ್ಲಿಗೆ ಬಂದು ಕಾದು ಕುಳಿತಿರುತ್ತಾರೆ. ಇಂತಹ ಪರಿಸ್ಥಿತಿ

ಇರುವಾಗ ಅವರ ಜೀವನಕ್ಕೆ ತೊಂದರೆ ಇರುವಾಗ ಆ ವ್ಯವಸ್ಥೆಯನ್ನು ಏನಾದರೂ ನಾವು ಶಾಸಕಾಂಗದ ಮೂಲಕ ಬದಲಾವಣೆ ಮಾಡಲು ಸಾಧ್ಯವೇ ಎಂಬುದನ್ನು ಯೋಚಿಸಬೇಕು. ಅವರು ಸತ್ತ ತಕ್ಷಣ ಅವರ ಮನೆಗೆ ಸಹಕಾರ ಮಾಡುವಂಥ ವ್ಯವಸ್ಥೆ ಅವರ ಮನೆಯವರು ಹಾಗೂ ಮಕ್ಕಳು ಇರುತ್ತಾರೆ, ಇದರ ಬಗ್ಗೆ ಏನು ಮಾಡಬೇಕೆಂದು ತಾವು ಈ ಸದನ ಮುಗಿಯುವುದರೊಳಗಾಗಿ ಒಂದು ಸಭೆ ಕರೆದು ತಾವು ತೀರ್ಮಾನ ಮಾಡಿ ಮಾಜಿ ಶಾಸಕರುಗಳ ಜೀವನ ಭದ್ರತೆ, ಸರಿಯಿಲ್ಲದಿದ್ದರೆ ಅವರಿಗೆ ಅನುಕೂಲತೆ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಗಡ್ಡದೇವರಮಠ (ಶಿರಹಟ್ಟಿ) : ಮಾನ್ಯ ಅಧ್ಯಕ್ಷರೆ, ಶ್ರೀಯುತರಾದ ಟಿ.ಬಿ. ಬಾಳಿಕಾಯಿಯವರು 8ನೇಯ ವಿಧಾನಸಭೆಯಲ್ಲಿ ನಮ್ಮ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಅಧ್ಯಕ್ಷರೆ, ತಮಗೆ ಆಶ್ಚರ್ಯವಾಗಬಹುದು, ಬಹಳ ದಿವಸದ ಹಿಂದೆ 8ನೇ ವಿಧಾನಸಭೆಗೆ ಅವರು ಸ್ಪರ್ಧಿಸಿದ್ದರು. ಇವತ್ತಿಗೂ ಸಹಿತ ಅವರನ್ನು ನೋಡುತ್ತಾ ಇದ್ದದ್ದು ಅವರು ನಮ್ಮ ಊರಿನಲ್ಲಿ ಆಗಲಿ ಇತರ ಕಡೆಗಳಲ್ಲಿ ಅಡ್ಡಾಡ ಬೇಕಾದರೆ ಸೈಕಲ್ ಮೇಲೆ ಹೋಗುತ್ತಿದ್ದರು. ಅಷ್ಟೇ ಅಲ್ಲ, ಬೇರೆ ಗ್ರಾಮೀಣ ಪ್ರದೇಶಕ್ಕೆ ಹೋಗುವಂತಹ ಸಂದರ್ಭದೊಳಗೆ ಬಸ್ಸಿನಲ್ಲಿ ಅಡ್ಡಾಡುತ್ತಿದ್ದರು. ಅಷ್ಟೇ ಅಲ್ಲ, ಇವತ್ತಿನವರೆಗೂ ಸಹಿತ ತೀರಿಕೊಂಡಾಗಲೂ ಸಹಿತ ಅವರು ಬಾಡಿಗೆ ಮನೆಯಲ್ಲಿಯೇ ತಮ್ಮ ಕೊನೆಯ ಉಸಿರು ಎಳೆದಿದ್ದನ್ನು ಇವತ್ತು ನಾನು ತಮಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದರ ಜೊತೆಗೆ ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಹುಟ್ಟಿದರೂ ಸಹಿತ ಅವನಲ್ಲಿರುವಂತಹ ಪ್ರಾಮಾಣಿಕತನ, ವಿದ್ವತ್ ಮತ್ತು ಸಾಮಾಜಿಕ ಕಳಕಳಿ ಇರುವುದಾದರೆ ಎಂತಹ ಸ್ಥಾನಕ್ಕೂ ಕೂಡ ಮುಟ್ಟಬಹುದು ಎನ್ನುವುದಕ್ಕೆ ಸನ್ಮಾನ್ಯ ಬಾಳಿಕಾಯಿ ಜೀವನದ ಪದ್ಧತಿಯೇ ಒಂದು ಉದಾಹರಣೆ ಎಂದು ನಾನು ಇವತ್ತಿನ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದೇ ಕಾಲೇಜಿನ ವಿದ್ಯಾಮಾನಗಳನ್ನು ಮುಗಿಸುವಂತಹ ಸಂದರ್ಭದೊಳಗೆ ವಿಚಿತ್ರವಾದಂತಹ ಪರಿಸ್ಥಿತಿ ನಮ್ಮ ಕ್ಷೇತ್ರದಲ್ಲಿತ್ತು, ನನ್ನಂತಹವರು ಕಾಲೇಜು ಬಿಟ್ಟು ಹೊರಗೆ ಬಂದಂತಹವರನ್ನು ಕರೆದುಕೊಂಡು ಅವತ್ತಿನ ಒಂದು ಪುರಸಭೆಗೆ ನಮ್ಮನ್ನು ರಾಜಕೀಯ ಪರಿಚಯಿಸುವುದರ ಜೊತೆಗೆ ನನ್ನಂತಹ ಅನೇಕ ಹಲವಾರು ಮುಖಂಡರುಗಳಿಗೆ ರಾಜಕೀಯ ಮುಖಂಡತ್ವವನ್ನು ಕೊಟ್ಟಂತಹ ಹಿರಿಯ ಜೀವ, ಟಿ.ಬಿ. ಬಾಳಿಕಾಯಿಯವರದ್ದು. ಅವರು ಎಷ್ಟು ಮುಗ್ಧ ಸ್ವಭಾವದವರೆಂದರೆ, ಬಡವರ ಬಗ್ಗೆ ಕಳಕಳಿ ಎಂದರೆ ತೀರಿಕೊಂಡ ದಿವಸವೇ ಧಾರವಾಡಕ್ಕೆ ಹೋಗಿ ಬಸ್ಸಿನಿಂದ ಬರುವಂತಹ ಸಂದರ್ಭದಲ್ಲಿ, ಏನಾಯಿತೆಂದು ಹೇಳುತ್ತೇನೆ. ಈಗ ಹುಬ್ಬಳ್ಳಿ ಮತ್ತು ಲಕ್ಷ್ಮೇಶ್ವರ ಕನೆಕ್ಟಿಂಗ್ ರೋಡ್ ಭಯಂಕರ ಕೆಟ್ಟಿದೆ. ಅನೇಕ ಸಾರಿ ಈ ಫ್ಲೋರ್‌ನಲ್ಲಿ ಆ ವಿಷಯವನ್ನು ತಂದಿದ್ದೇನೆ. ಅಲ್ಲಿ ರಿಪೇರಿ ಮಾಡಿಸುವಂತಹ ವ್ಯವಸ್ಥೆ ಆಗಿಲ್ಲ. ಅಂತಹ ಒಂದು ಪ್ರಸಂಗದೊಳಗಡೆ ಒಂದು ಹೆಣ್ಣು ಮಗಳು ಒಂದು ಕೂಸನ್ನು ಎತ್ತಿಕೊಂಡು ಬಸ್ಸನ್ನು ಹತ್ತಿದಂತಹ

ಸಂದರ್ಭದೊಳಗೆ ಅಂತಹ ಆ ತಾಯಿಗೆ ಯಾರೂ ಕುಳಿತುಕೊಳ್ಳುವುದಕ್ಕೆ ಸೀಟನ್ನು ಕೊಡದೆ ಇರುವಂತಹ ಸಂದರ್ಭದಲ್ಲಿ ತಟಕ್ಕನೆ ಎದ್ದು ನಿಂತು ಸೀಟು ಕೊಟ್ಟರು. ಅವರಿಗೆ ಬಹಳ ತ್ರಾಸವಾಗಿತ್ತು ಆದರೂ ಸಹ ಎದ್ದುನಿಂತುಕೊಂಡು ಆ ತಂಗಿಗೆ ಸೀಟು ಕೊಡುವುದನ್ನು ನೋಡಿ ಬಾಕಿಯವರೆಲ್ಲರೂ ಸಹಿತ ಇಲ್ಲ ಸಾಹೇಬರೇ, ತಾವು ಕುಳಿತುಕೊಳ್ಳಿ ಎಂದು ಹೇಳಿರುವಂತಹ ಪ್ರಸಂಗವನ್ನು ಅಲ್ಲಿಯ ಜನರು ಹೇಳುವಂತಹ ಪ್ರಸಂಗವನ್ನು ಮೊನ್ನೆ ನಾನು ಅಂತ್ಯ ಸಂಸ್ಕಾರಕ್ಕೆ ಹೋಗುವಂತಹ ಸಂದರ್ಭದಲ್ಲಿ ಕೇಳಿದೆ. ಸಾಮಾನ್ಯವಾಗಿ ನಾವು ಶಾಸಕರಾದಂತಹವರು ಯಾರಾದರೂ ಬಸ್ಸು ಹತ್ತಿದ ತಕ್ಷಣ ಕಂಡಕ್ಟರ್ ಸೀಟನ್ನು ಕೊಡದೇ ಇದ್ದರೆ ಮತ್ತೊಬ್ಬರು ಎದ್ದು ಕೊಡದಿದ್ದರೆ ಕಿರಿಕಿರಿಯಾಗುವಂತಹ ಸಂದರ್ಭವನ್ನು ನಾವು ನೋಡುತ್ತೇವೆ. ಅಂದರೆ ಅಷ್ಟು ಸರಳಜೀವಿಯಾಗಿದ್ದರು. ಅವರು ಇದುವರೆವಿಗೂ ಗಂಜಿ ಹಾಕಿದ ಅರಿವೆಯನ್ನು ಹಾಕಿಲ್ಲ, ಬರೀ ತಮ್ಮ ಅರಿವೆಯನ್ನು ತಾವೇ ಒಗೆದುಕೊಂಡು ಹಾಕುವಂತಹ ವ್ಯವಸ್ಥೆಯಲ್ಲಿದ್ದರು. ಅಂತಹ ಒಬ್ಬ ಸಾಮಾನ್ಯವಾದ ವ್ಯಕ್ತಿ, ಸಮಾಜದ ಬಗ್ಗೆ ಅತೀವ ಕಳಕಳಿಯನ್ನು ಹೊಂದಿದ ವ್ಯಕ್ತಿ, ಅತ್ಯಂತ ಪ್ರಾಮಾಣಿಕವಾದಂತಹ ವ್ಯಕ್ತಿ ತಮ್ಮದೇ ಆದಂತಹ ನೇರ ನುಡಿಗೆ ಎಂದು ಸಹಿತ ಶ್ರೀಮಂತಿಕೆಯನ್ನಾಗಲಿ ಸಹಿಸಿದವರಲ್ಲ, ಇವತ್ತು ಚುನಾಯಿತ ಪ್ರತಿನಿಧಿಗಳಾಗಲಿ, ಕಛೇರಿಗಳಾಗಲಿ, ಇವತ್ತು ಪೊಲೀಸ್ ಸ್ಟೇಷನ್‌ಗಳಾಗಲಿ, ನಿಸ್ಸಹಾಯಕರ ಪರವಾಗಿ ಇರುವುದು ಎಂದು ಸದಾ ಕಾಲ ಭಾವಿಸಿಕೊಂಡು ಬಂದವರಾಗಿದ್ದಾರೆ. ನಮಗೆಲ್ಲಾ ಅತ್ಯಂತ ಹಿರಿಯ ಮಾರ್ಗದರ್ಶಿಗಳಾಗಿದ್ದರು. ಅವತ್ತು ಬೆಳಿಗ್ಗೆ ಸುಮಾರು 4 ಗಂಟೆಗೆ ಅವರ ನಿಧನದ ವಾರ್ತೆ ನನಗೆ ಎಲ್.ಹೆಚ್.ಗೆ ಬಂದಾಗ ತಿಳಿಯಿತು. ನಿಜವಾಗಿಯೂ ಸಹ ಬಹಳ ಕೆಟ್ಟದು ಎನಿಸಿತು. ಏಕೆಂದರೆ ನಮ್ಮನ್ನೆಲ್ಲಾ ಅವರು ರಾಜಕೀಯಕ್ಕೆ ಪರಿಚಯಿಸಿದಂತಹ ಹಿರಿಯ ಜೀವವಾಗಿದ್ದರು. ಅಲ್ಲಿಯೂ ಸಹಿತ ಅಂತಹ ಒಂದು ವಾತಾವರಣವಿತ್ತು. ಹೊರಗಿನವರಿಗೆ ಇಂತಹ ದುಃಖ ಆವರಿಸಿರುವಂತಹ ಸಂದರ್ಭದೊಳಗಡೆ ಅಲ್ಲಿ ಅವರ ಮನೆತನದವರಿಗೆ ತುಂಬಲಾರದ ಒಂದು ನಷ್ಟ ಮತ್ತು ನೋವು ಇವತ್ತು ಪಕ್ಷಕ್ಕೆ ಅತೀವವಾಗಿ ಯಾವುದೇ ರಾಜಕೀಯ ಮುಖಂಡರುಗಳು ಇರಲಿ ಅವರು ಮಾಡಿರುವಂತಹ ತಪ್ಪುಗಳ ಬಗ್ಗೆ ಅವರನ್ನು ಕರೆದು ನೇರವಾಗಿ ಬೈಯುವಂತಹ ವಿಶೇಷವಾದಂತಹ ಚಟ ಇತ್ತು. ಇಲ್ಲಿರುವವರನ್ನು ಟೀಕೆ ಮಾಡುವುದಾದರೆ ಅವರನ್ನು ಇಲ್ಲಿರುವವರ ಬಗ್ಗೆ ಮಾತ್ರ ಮಾತನಾಡುತ್ತಿದ್ದರು. ಆದರೆ ಯಾರಾದರೂ ತಪ್ಪು ಮಾಡಿದವರು ಎದುರಿಗೆ ಬಂದರೆ, ಅವರು ಬೇಕಾದವರೂ ಇರಬಹುದು ಅವರಿಗೆ ನೇರವಾಗಿ ಮಾತನಾಡುವಂಥ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರ ಸೇವೆಯಾಗಲಿ, ಮಾರ್ಗದರ್ಶನವಾಗಲಿ ನಮ್ಮ ಕ್ಷೇತ್ರದ ಜನಕ್ಕೆ ಇತ್ತು. ಆದರೆ ಅವರು ವಿಧಿವಶರಾಗಿದ್ದು ನಮಗೆಲ್ಲರಿಗೂ ಸಹ ನೋವನ್ನು ತಂದಿದೆ, ಆ ನೋವನ್ನು ಅವರ ಕುಟುಂಬಕ್ಕೆ ಸಹಿಸುವಂಥ ಶಕ್ತಿಯನ್ನು ದಯಾಮಯನಾದ ಪರಮಾತ್ಮ ನೀಡಲಿ ಎಂದು

ಹೇಳುತ್ತಾ ಇಂಥ ಒಂದು ಸಂತಾಪ ಸೂಚನೆಯನ್ನು ತಾವು ತಂದಿದ್ದಕ್ಕೆ ಹಾಗೂ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಶ್ರೀ ತಿಪ್ಪಣ್ಣ ಬಸವಣ್ಣಪ್ಪ ಬಾಳಿಕಾಯಿಯವರ ನಿಧನಕ್ಕೆ ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲವನ್ನು ಕೊಡುತ್ತಾ, ಬಾಳಿಕಾಯಿಯವರು ಸುಮಾರು 1975–85ರವರೆಗೆ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. 5 ವರ್ಷಗಳ ಕಾಲ ಅವರನ್ನು ಹತ್ತಿರದಿಂದ ನಾವು ನೋಡಿದ್ದೇವೆ. ಅವರು ಬಹಳ ನೇರವಾಗಿ ನುಡಿಯುವ, ನಿಷ್ಠೂರವಾದಂತಹ ವ್ಯಕ್ತಿಯವರು. ಮತ್ತೆ ಎಲ್ಲದಕ್ಕಿಂತ ಮುಖ್ಯವಾಗಿ ಜನಪರವಾದ ಕಾಳಜಿ ಇಟ್ಟುಕೊಂಡು ಹೋರಾಟ ಮಾಡುತ್ತಿದ್ದರು, ಪ್ರಾಮಾಣಿಕವಾಗಿದ್ದರು, ಇವತ್ತು ರಾಜಕೀಯದಲ್ಲಿ ಬಹಳಷ್ಟು ಮೌಲ್ಯಗಳ ಕುಸಿತವಾಗುತ್ತಿದೆ, ಹದಗೆಡುತ್ತಿದೆ ಎನ್ನುವಂಥ ಪರಿಸ್ಥಿತಿಯಲ್ಲಿ 5 ವರ್ಷಗಳ ಕಾಲ ನಾನು ಅವರನ್ನು ನೋಡಿದಂಥ ಸಂದರ್ಭಗಳಲ್ಲಿ ಯಾವತ್ತೂ ಕೂಡ ಆ ಪ್ರಾಮಾಣಿಕತೆಗೆ ಧಕ್ಕೆ ಬಾರದ ರೀತಿಯಲ್ಲಿ 5 ವರ್ಷ ಕೆಲಸ ಮಾಡಿರುವುದನ್ನು ನಾನು ನೋಡಿದ್ದೇನು. ಅವರು ವಕೀಲರಾಗಿಯೂ ಕೂಡ ಕೆಲಸ ಮಾಡುತ್ತಿದ್ದರು. ಅವರ ಸದಸ್ಯತ್ವ ಹೋದ ತಕ್ಷಣವೇ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದ್ದರು. ವಕೀಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಾ, ರಾಜಕಾರಣವನ್ನೂ ಕೂಡ ಮಾಡುತ್ತಿದ್ದರು. ಸಾಮಾನ್ಯವಾಗಿ ರಾಜಕಾರಣಕ್ಕೆ ಬಂದ ಕೂಡಲೇ ವಕೀಲಿ ಕೆಲಸವನ್ನು ಬಿಟ್ಟುಬಿಡುತ್ತಾರೆ. ಬಹಳ ಅಪರೂಪ, ಈಗ ರಾಜಕೀಯದಲ್ಲಿ ಬಹಳ ಚೆನ್ನಾಗಿ ಸಂಪಾದನೆಯಾಗಿದೆ, ವಕೀಲಿ ಕೆಲಸ ಏತಕ್ಕೆ ಬೇಕು? ರಾಜಕೀಯದಲ್ಲೇ ಚೆನ್ನಾಗಿ ಸಂಪಾದನೆಯಾಗಿದೆ, ಇದೇ ಒಂದು ವೃತ್ತಿ ಎನ್ನುವವರೂ ಸಹ ಇದ್ದಾರೆ. ಆದರೆ ರಾಜಕೀಯವನ್ನು ಬಾಳಿಕಾಯಿಯವರು ವೃತ್ತಿ ಮಾಡಿಕೊಂಡಿರಲಿಲ್ಲ. ಮತ್ತೆ 1985ರ ನಂತರ ಈ ಮನೆಗೆ ಅವರು ಬರಲಿಕ್ಕಾಗಲಿಲ್ಲ. ನಂತರ ವಕೀಲರಾಗಿ ಕೆಲಸ ಮಾಡಿದರು. ಬಹುಶಃ ಅಂಥ ಒಬ್ಬ ನಿಷ್ಠಾವಂತ, ನೇರನುಡಿಯ, ಪ್ರಾಮಾಣಿಕವಾದಂಥ ವ್ಯಕ್ತಿ, ಮುಖ್ಯವಾಗಿ ಜನಪರ ಕಾಳಜಿಯನ್ನು ಹೊಂದಿದ್ದರು. ಆ ವ್ಯಕ್ತಿ ನಮ್ಮ ಜೊತೆಯಲ್ಲಿ ನಾವೆಲ್ಲಾ ಮಂತ್ರಿಗಳಾಗಿದ್ದಾಗ ಶಾಸಕರಾಗಿದ್ದರು. ಅವರ ಕ್ಷೇತ್ರದ ಕೆಲಸ ಮಾಡಿಕೊಡದೇ ಹೋದರೆ ನಮ್ಮೊಂದಿಗೆ ಬಂದು ಅವರು ಜಗಳವಾಡುತ್ತಿದ್ದರು ಅಥವಾ ಸ್ನೇಹಪರರಾಗಿ ಜಗಳವಾಡುವಂಥ ಒಂದು ಪ್ರವೃತ್ತಿ ಅವರಲ್ಲಿತ್ತು. ಇವತ್ತು ಅಂಥ ವ್ಯಕ್ತಿಯನ್ನು ನಾವೆಲ್ಲಾ ಕಳೆದುಕೊಂಡಿದ್ದೇವೆ. ಅವರಿಂದ ಸಾರ್ವಜನಿಕ ಕ್ಷೇತ್ರಕ್ಕೆ ನಷ್ಟವಾಗಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ, ಅವರ ಕುಟುಂಬವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿ ಆ ಭಗವಂತ ನೀಡಲಿ, ಏಕೆಂದರೆ ಅವರಿಗೆ ಬಹಳ ಚಿಕ್ಕ ವಯಸ್ಸು, 45ನೇ ಇಸವಿಯಲ್ಲಿ ಅವರು ಹುಟ್ಟಿದ್ದರು. ಈಗ 61 ವರ್ಷ ವಯಸ್ಸಿಗೆ ಅವರು ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಇನ್ನೂ ಬಹಳ ವರ್ಷಗಳ ಕಾಲ ಅವರು ಇರಬೇಕಾಗಿತ್ತು. 61 ವರ್ಷ ಎಂದರೆ ಬಹಳ ದೊಡ್ಡದೇನಲ್ಲಾ, ಇವತ್ತು ನಮ್ಮ ಭಾರತದಲ್ಲಿ

ಮರಣ ಹೊಂದುವ ಆಯಸ್ಸು ಎಂದರೆ ಸರಾಸರಿ 62 ವರ್ಷ. ಆದರೆ ಇವರು 61 ವರ್ಷಕ್ಕೆ ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಹಾಗಾಗಿ ಮತ್ತೊಮ್ಮೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಕೋರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ತಾವು ತಂದಿರತಕ್ಕ ಸಂತಾಪಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರು, ಹಿರಿಯ ಸದಸ್ಯರೆಲ್ಲರೂ, ಮಾನ್ಯ ಗಡ್ಡದೇವರಮಠರವರು ಮಾತನಾಡಿದ್ದಾರೆ. ಶ್ರೀಯುತರಿಗೂ ನನಗೂ ಬಹಳ ವರ್ಷಗಳಿಂದ ಸಂಪರ್ಕ ಇತ್ತು. ನದಿಯೊಂದನ್ನು ಬಿಟ್ಟರೆ ಶಿರಹಟ್ಟಿ ನಮ್ಮ ಪಕ್ಕದ ಕ್ಷೇತ್ರವೇ ಆಗಿದೆ. ಇತ್ತೀಚೆಗೆ ನಾವೆಲ್ಲಾ ಕಲೆತು ನಮ್ಮ ತಾಲ್ಲೂಕಿನ ಬೀಗತನವನ್ನೂ ಸಹ ಮಾಡಿಸಿ ಮದುವೆ ಕೂಡ ಆಯಿತು, ಆ ಸಂದರ್ಭದಲ್ಲಿ ಬಹಳ ಹತ್ತಿರದ ಸಂಪರ್ಕದಲ್ಲಿದ್ದಂಥ ವ್ಯಕ್ತಿಯಾಗಿದ್ದರು. ಅವರು ಬಹಳ ನಿಷ್ಠೂರವಾದಂಥ ವ್ಯಕ್ತಿಯಾಗಿದ್ದರು, ರಾಜಕೀಯದಲ್ಲಿ ಆವತ್ತಿನ ದಿವಸ ಉಪ್ಪಿನಾಳ್ ಗೂಳಪ್ಪನಂತಹ ವ್ಯಕ್ತಿಯ ವಿರುದ್ಧ ಸ್ಪರ್ಧೆ ಮಾಡಲಿಕ್ಕೆ ನಮ್ಮ ಪಕ್ಷದಲ್ಲಿ ಜನರು ಇರುತ್ತಿರಲಿಲ್ಲ. ಆಗ ಇವರನ್ನು ನಾನು ಒಪ್ಪಿಸಿ 1985ರಲ್ಲಿ ಚುನಾವಣೆಗೆ ನಿಂತು ಅವರು ಜಯಶೀಲರಾದರು. ಅವರು ಒಳ್ಳೆಯ ಪ್ರಾಮಾಣಿಕರಾದಂಥ ವಕೀಲರೂ ಕೂಡ ಆಗಿದ್ದರು. ಸ್ವಲ್ಪ ಸ್ಥೂಲಕಾಯರಾಗಿದ್ದುದರಿಂದ ಅವರಿಗೆ ಸ್ವಲ್ಪ ತೊಂದರೆಗಳಿದ್ದವು, ಮತ್ತು ನೇರನುಡಿಯ ವ್ಯಕ್ತಿಯಾಗಿದ್ದರಿಂದ ಸ್ವಲ್ಪ ನಿಷ್ಠೂರವನ್ನು ಸಹ ಕಟ್ಟಿಕೊಳ್ಳುತ್ತಿದ್ದರು. ಹಿಂದೆ ಬೊಮ್ಮಾಯಿಯವರ ಸರ್ಕಾರ ಉರುಳಿಸುವಂಥ ಸಂದರ್ಭದಲ್ಲಿ ಇವರು ಮತ್ತು ಉಪ್ಪಿನ್‌ರವರು ಸಹಿ ಮಾಡಿ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟಿದ್ದರು ಮತ್ತೆ ಆ ಸಂದರ್ಭದಲ್ಲಿ ನಾವೆಲ್ಲಾ ಅವರ ಮನೆಗೆ ಹೋಗಿ ಚರ್ಚೆ ಮಾಡಿದ್ದೆವು. ಆ ಕಾಲದಲ್ಲಿ ಬೊಮ್ಮಾಯಿಯವರೂ ಕೂಡ ತಪ್ಪು ಭಾವಿಸಬಾರದೆಂದು ಅವರನ್ನು ತಮ್ಮ ಮನೆಗೆ ಕರೆಸಿದಾಗ, ಬಾಳಿಕಾಯಿಯವರು ಕೆಲವು ವಿಷಯಗಳಲ್ಲಿ ತಮಗಾಗಿದ್ದ ಅಸಮಾಧಾನವನ್ನು ತಿಳಿಸಿ ಮತ್ತೆ ರಾಜ್ಯಪಾಲರಿಂದ ಪತ್ರವನ್ನು ವಾಪಸ್ಸು ಪಡೆದಿದ್ದರು. ಮೊನ್ನೆ ಮಾನ್ಯ ಗಡ್ಡದೇವರಮಠರವರು ಲಕ್ಷ್ಮೇಶ್ವರದಲ್ಲಿ ದೊಡ್ಡ ಕಾರ್ಯಕ್ರಮವನ್ನು ಏರ್ಪಾಡು ಮಾಡಿದಾಗ ಬಾಳಿಕಾಯಿಯವರು ಭಾಗವಹಿಸಿದ್ದರು. ಇವರಿಗೂ ಅವರಿಗೂ ರಾಜಕೀಯವಾಗಿ ವಿರೋಧವಿದ್ದರೂ, ಅವರು ಅಜಾತಶತ್ರುವಾಗಿದ್ದರು, ಅವರ ಬಗ್ಗೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದರು. ಗಡ್ಡದೇವರಮಠರವರು ಕಾಲೇಜು ಬಿಟ್ಟು ಬಂದ ಕೂಡಲೇ ಲಕ್ಷ್ಮೇಶ್ವರದ ಪುರಸಭೆಯ ಅಧ್ಯಕ್ಷರೂ ಕೂಡ ಆದರು, ಆ ಸಂದರ್ಭದಲ್ಲಿ ಇವರೆಲ್ಲಾ ಚಿಕ್ಕ ವಯಸ್ಸಿನ ತರುಣರನ್ನು ತಂದು ಬಹಳ ಅಭಿವೃದ್ಧಿಪರವಾದ ಕೆಲಸಗಳನ್ನು ಮಾಡಿರುವುದು, ಅಲ್ಲಿನ ಮುಖ್ಯಮಂದಿರದಲ್ಲಿ ಕಾರ್ಯಕ್ರಮಗಳನ್ನು ಮಾಡಿಸತಕ್ಕಂಥ ಸಂದರ್ಭದಲ್ಲಿ ಇವರ ಜೊತೆಗೆಲ್ಲಾ ಕಲೆತು ಯಾವಾಗಲೂ ಕೂಡ ಬರುತ್ತಿದ್ದರು. ಹೀಗಿರುವಾಗ ನಿನ್ನೆ ನನಗೆ ಫೋನ್ ಬಂದಂಥ ಸಂದರ್ಭದಲ್ಲಿ ನಂಬಲಿಕ್ಕೆ ಕೂಡ ಸಾಧ್ಯವಾಗಲಿಲ್ಲ, ಏಕೆಂದರೆ ಬಹಳ ಚಿಕ್ಕವಯಸ್ಸು, ಸಾಯುವಂಥ ವಯಸ್ಸೇನಲ್ಲ. ಅವರು

ಶಾಸಕರಾಗಿದ್ದುದು ಕೇವಲ ಐದು ವರ್ಷಗಳಾಗಿದ್ದರೂ ಕೂಡ ಸಾರ್ವಜನಿಕ ಜೀವನದಲ್ಲಿ ಬಹಳ ವರ್ಷಗಳ ಕಾಲ ಇದ್ದಂಥ ಒಬ್ಬ ವ್ಯಕ್ತಿ. ಒಂದು ಪ್ರಾಮಾಣಿಕತೆಗೆ ಒಬ್ಬ ಶಾಸಕ ಹೇಗಿರಬೇಕು ಎನ್ನುವುದಕ್ಕೆ ಅವರು ಆದರ್ಶಪ್ರಾಯರಾಗಿದ್ದರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಾವು ತಂದಿರುವಂಥ ಸಂತಾಪಸೂಚನೆಗೆ ನಮ್ಮೆಲ್ಲರ ಒಪ್ಪಿಗೆ ಕೂಡ ಇದೆ. ಅವರ ಅಗಲಿಕೆಯ ದುಃಖವನ್ನು ಭರಿಸುವಂಥ ಶಕ್ತಿ ಅವರ ಕುಟುಂಬಕ್ಕೆ ದೊರೆಯಲಿ ಎಂದು ಹಾರೈಸಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಂಚೋಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಳಿಕಾಯಿಯವರು 1985ರಲ್ಲಿ ಆರಿಸಿ ಬಂದಾಗಲೂ ಸಹ ಅಂದಿನ ಜನತಾ ಪರಿವಾರ ಅಂದರೆ ಜನತಾ ಪಕ್ಷದಲ್ಲಿ ಅನೇಕ ರೀತಿಯ ಮತಭೇದಗಳು ಇದ್ದವು. ಆ ಮತಭೇದಗಳಲ್ಲಿ ಕೆಲವೊಂದು ಸಲ ಅವರ ವಿರುದ್ಧ ಇದ್ದ ಅಧಿಕಾರಯುಕ್ತ ಗುಂಪೇನಿತ್ತು, ಬಹುಶಃ ಅದರಿಂದಲೇ ಅವರ ರಾಜಕೀಯ ಜೀವನವನ್ನು ಬಲಿ ತೆಗೆದುಕೊಳ್ಳಲಾಯಿತು. ಅವರು ಜನತಾ ಪರಿವಾರ ಬಿಟ್ಟು ಕೊನೆಗೆ ಬಿ.ಜೆ.ಪಿ. ಪಕ್ಷಕ್ಕೆ ಸೇರಿದರು. ಅವರ ಸ್ವಭಾವವೇ ಅಂತಹುದಾಗಿತ್ತು. ಏಕೆಂದರೆ ಅವರು ನೇರನುಡಿಯ ಸ್ವಭಾವ, ಯಾವುದೇ ಮತಭೇದವಿದ್ದರೆ ಅವರ ಎದುರಿಗೆ ಹೇಳುತ್ತಿದ್ದರು. ಆ ದೃಷ್ಟಿಯಿಂದ ಅವರು ಆರಿಸಿ ಬರಲಿಲ್ಲ ಅಥವಾ ಅವರಿಗೆ ಚುನಾವಣೆಗೆ ಸ್ಪರ್ಧಿಸಲಿಕ್ಕೆ ಟಿಕೆಟ್ ಕೊಡಲಿಲ್ಲ. ಅವರಿಗೆ ಮೊದಲು ಯಾರು ಸಪೋರ್ಟ್ ಮಾಡಿದ್ದರೂ ಅವರೇ ಅವರಿಗೆ ಬೆಂಬಲ ನೀಡದೇ ಕಟ್ ಮಾಡಿದರು. ಒಂದು ಸಲ ಮತಭೇದ ಬಂದಾಗ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟು ಮತ್ತೆ ಹಿಂತೆಗೆದುಕೊಂಡಿದ್ದರೂ ಕೂಡ ಅವರು ಆವತ್ತಿನಿಂದ ಮತಭೇದಕ್ಕೆ ಬಲಿಯಾಗಿ ಕೊನೆಗೆ ಬೇರೆ ಪಕ್ಷ ಸೇರಬೇಕಾಯಿತು, ಅಂತಹ ಶಾಸಕರು ವಿಧಾನಸಭೆಯಲ್ಲಿದ್ದರು ಎಂಬುದು ಹೆಮ್ಮೆಯ ವಿಷಯವಾಗಿದೆ. ಇವತ್ತು ಅವರು ಮೃತರಾಗಿರುವುದರಿಂದ ನಮಗೆಲ್ಲಾ ಬಹಳ ದುಃಖವಾಗಿದೆ, ತಾವು ತಂದಂಥ ಈ ಪ್ರಸ್ತಾವನೆಗೆ ನಾವೆಲ್ಲಾ ಸಮರ್ಥಿಸಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದಲ್ಲಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶ್ರೀ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ಕೋರಿಕೆ.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಚರ್ಚೆ.